**O.S** 42/2010

**PW**-1

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 22.02.2024 ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದಃಶ್ರೀ J.P ರವರಿಂದ**

ನಿಪಿ-17 ಕ್ಕೂ ಈ ದಾವೆಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಪಿ-17 ರಲ್ಲಿ ಚಿಕ್ಕತಾಯಮ್ಮ ಎಂದು ಇದೆ ಎಂದರೆ ಸಾಕ್ಷಿಯು ತಮ್ಮ ತಾಯಿ ಹೆಸರು ಸಾವಿತ್ರಮ್ಮ ಆದರೆ ಅವರ ಹುಟ್ಟು ಹೆಸರು ಚಿಕ್ಕತಾಯಮ್ಮ ಎಂದು ನುಡಿಯುತ್ತಾರೆ. ನಿಪಿ-17 ರಲ್ಲಿ ಇರುವಂತಹ ಆಲ್ದೂರು ಬಸಪ್ಪನೇ ಬೇರೆ ಹಾಗೂ ಪೊಲೀಸ್ ಬಸಪ್ಪ ರವರೇ ಬೇರೆ ವ್ಯಕ್ತಿ ಎಂದರೆ ಸರಿಯಲ್ಲ. ಪೊಲೀಸ್ ಬಸಪ್ಪ ರವರು ತಮ್ಮ ಜೀವಿತಾವದಿಯ ಕೊನೆಯ ವರೆಗೂ ಅವರ ಹೆಂಡತಿ ಪುಟ್ಟಮ್ಮ ರವರ ಜೊತೆ ಬದುಕುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಪುಟ್ಟಮ್ಮ ರವರ ಹೆಸನ್ನು ಉದ್ದೇಶಪೂರ್ವಕವಾಗಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ನ್ನು ನಾವು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ಮತ್ತು ನನ್ನ ತಂದೆ ಪ್ರಭುಸ್ವಾಮಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಬಸಪ್ಪ ಮತ್ತು ರುದ್ರಮ್ಮ ರವರಿಗೆ ವಾದಿಯು ಏಕಮಾತ್ರ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭೋಗ್ಯ ತೀರುವಳಿಯು 1971 ನೇ ಇಸವಿಯಲ್ಲಿ ಆಗಿರುವ ಕಾರಣದಿಂದ ನನಗೆ ಈ ದಾವೆಯನ್ನು ಹೂಡುವ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ದಾಖಲೆಗಳಲ್ಲಿ ಎನ್.ಬಿ ಶಿವಣ್ಣ ರವರ ಹೆಸರು ಬರುತ್ತಿದ್ದರೂ ಸಹ ಅವರನ್ನು ದುರುದ್ದೇಶದಿಂದ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೆ 1 ಮತ್ತು 3 ನೇ ಪ್ರತಿವಾದಿಗಳ ವಿರುದ್ಧವಾಗಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಎನ್.ಬಿ ಶಿವಣ್ಣ ರವರು 1971 ರಲ್ಲಿ ಭೋಗ್ಯ ತೀರುವಳಿ ಮಾಡಿಸಿಕೊಂಡ ನಂತರ ಅವರೇ ದಾವಾ ಆಸ್ತಿಗೆ ಮಾಲಿಕರಾಗಿ ಕಂದಾಯವನ್ನು ಕಟ್ಟುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಮೋಸದಿಂದ ಮಾಡಿಕೊಂಡು ಬಂದಿರುವುದಾಗಿ ನುಡಿಯುತ್ತಾರೆ. ಕಾನೂನು ಬದ್ಧವಾಗಿ ಎನ್.ಬಿ ಶಿವಣ್ಣ ರವರು ಕಂದಾಯ ದಾಖಲಾತಿಗಳಲ್ಲಿ ತಮ್ಮ ಹೆಸರನ್ನು ನಮೂದು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಎನ್.ಬಿ ಶಿವಣ್ಣ ರವರು ತಮ್ಮ ಜೀವಿತಾವದಿಯಲ್ಲಿ ದಾವಾ ಆಸ್ತಿಯ ಸ್ವಾಧೀನದಲ್ಲಿ ಮಾಲಿಕರಾಗಿ ಇದ್ದರು ಹಾಗೂ ಅವರ ಮರಣದ ನಂತರ ಅವರ ವಾರಸುದಾರರಾದ 4 ರಿಂದ 8 ನೇ ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನದಲ್ಲಿ ಮಾಲಿಕರಾಗಿ ಇದ್ದಾರೆ ಎಂದು ಸೂಚಿಸುವ ನಿಮ್ಮ ಸಲಹೆಗಳು ಸರಿಯಲ್ಲ. ನಾನು ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸತ್ಯ ಸಂಗತಿಗಳು ಗೊತ್ತಿದ್ದರೂ ಸಹ ಈ ಸುಳ್ಳು ದಾವೆಗೆ ಅನುಕೂಲವಾಗುವಂತೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

22.02.2024.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.